**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

<u>ಸಿ.ಸಿ. ನಂ.***368/2021***</u>

***<u>ಫಿರ್ಯಾದುದಾರರುಃ</u>*** ಃ ಸರ್ಕಾರದ ಪರವಾಗಿ ಕೊಪ್ಪ ಪೊಲೀಸರು

**ವಿರುದ್ಧ**

***<u>ಆರೋಪಿತರುಃ</u>*** 1. ಮೊಯಿದ್ದೀನ್ ಎಸ್. ಹೆಚ್. ಬಿನ್ ಹಾಜಬ್ಬ, 51 ವರ್ಷ, ಎ.ಬಿ. ಕನ್ಸ್ ಸ್ಟ್ರಕ್ಷನ್ ಮಾಲೀಕರು, ವಾಸ ಸುಭಾಷ ರಸ್ತೆ, ಕೊಪ್ಪ ಪಟ್ಟಣ.

2. ಶ್ರೀಕಾಂತ ಅಶೋಕ ಗೊಬ್ಬೆನವರ್ ಬಿನ್ ಅಶೋಕ ಗೊಬ್ಬೆನವರ್, 29 ವರ್ಷ, ಕೂಲಿ ವಾಸ ಹನುಮಾಪುರ ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ, ಹಾಲಿ ವಾಸ ಕಾಚ್ಗಲ್ ತನುಡಿ ಗ್ರಾಮ, ಕೊಪ್ಪ ತಾಲ್ಲೂಕು. **(ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)**

3. ಬೇಬಿಚ @ ಪೀಟರ್, ಬಿನ್ ಲೇಟ್ ಮ್ಯಾಥ್ಯು, 64 ವರ್ಷ, ರೈಟರ್ ಕೆಲಸ, ವಾಸ ಅಮ್ಮಡಿ ರಸ್ತೆ, ಗುಣವಂತೆ, ಕೊಪ್ಪ ತಾಲ್ಲೂಕು.

4. ಶ್ರೀನಿವಾಸ ಪೂಜಾರಿ ಬಿನ್ ಕುಕ್ರಾ ಪೂಜಾರಿ, 55 ವರ್ಷ, ರೈಟರ್ ಕೆಲಸ, ವಾಸ 2 ನೇ ಕ್ರಾಸ್, ಕುವೆಂಪು ನಗರ, ಗುಣವಂತೆ, ಹರಂದೂರು, ಕೊಪ್ಪ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ.,ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 11.03.2021 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಯ ತನೂಡಿ ಗ್ರಾಮ, ಮಸೆಮಕ್ಕಿಯ ಸ.ನಂ.29 ರಲ್ಲಿ ನಾಗೇಶಗೌಡ ಮತ್ತು ಪದ್ಮಾವತಿಯವರ ಭತ್ತದ ಗದ್ದೆಯ ಪಕ್ಕದ ಸರ್ಕಾರಿ ಖರಾಬು ಜಾಗದಲ್ಲಿ ಚಾಸಾ.1 ಪ್ರಕಾಶ್ ರವರ ಜಾಗದ ಪಕ್ಕದಲ್ಲಿ ಕೆರೆ ಮಾಡುತ್ತಿದ್ದ 1 ನೇ ಆರೋಪಿಗೆ ಏಕೆ ಇಲ್ಲಿ ನಮ್ಮ ಜಮೀನಿನ ಪಕ್ಕದಲ್ಲಿ ಕೆರೆ ಮಾಡುತ್ತಿದ್ದೀರ ಎಂದು ಚಾಸಾ-1 ರವರು

ಕೇಳಿದಾಗ ಆರೋಪಿಗಳಾದ ನಿವೇಲ್ಲರೂ ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿದ್ದೀರಿ. ಇದರಿಂದಾಗಿ ಈ ನಿಮ್ಮಗಳ ಕೃತ್ಯವು ಭಾರತ ದಂಡ ಸಂಹಿತೆ ಕಲಂ **504 ಸಹವಾಚಕ ಕಲಂ 34ರ** ಅಡಿಯಲ್ಲಿ ಈ ನ್ಯಾಯಾಲಯದ ವಿಚಾರಣೆಯ ಅಧಿಕಾರ ವ್ಯಾಪ್ತಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಮುಂದುವರೆದು, 4ನೇ ಆರೋಪಿಯಾದ ನೀವು ಚಾಸಾ-1 ರವರ ಬೆನ್ನಿಗೆ, ತೊಡೆಗೆ, ಎಡ ಕೈಗೆ ದೊಣ್ಣೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದೀರಿ. ಇದರಿಂದಾಗಿ ಈ ನಿಮ್ಮಗಳ ಕೃತ್ಯವು ಭಾರತ ದಂಡ ಸಂಹಿತೆ ಕಲಂ **324 ಸಹವಾಚಕ ಕಲಂ 34**ರ ಅಡಿಯಲ್ಲಿ ಈ ನ್ಯಾಯಾಲಯದ ವಿಚಾರಣೆಯ ಅಧಿಕಾರ ವ್ಯಾಪ್ತಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಮುಂದುವರೆದು, ಚಾಸಾ-1 ರವರಿಗೆ ಈ ಜಾಗದಲ್ಲಿ ನಿನ್ನನ್ನು ನೋಡಿದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿದ್ದೀರಿ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾರತ ದಂಡ ಸಂಹಿತೆ ಕಲಂ **506 ಸಹವಾಚಕ ಕಲಂ 34** ರ ಅಡಿಯಲ್ಲಿ ಈ ನ್ಯಾಯಾಲಯದ ವಿಚಾರಣೆಯ ಅಧಿಕಾರ ವ್ಯಾಪ್ತಿಯಲ್ಲಿ ಅಪರಾಧವೆಸಗಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-1 ತಿಳಿಯಿತು

ಆ-2 ತಿಳಿಯಿತು

ಆ-3 ತಿಳಿಯಿತು

ಆ-4 ತಿಳಿಯಿತು

ಪ್ರಃ2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-1 ವಿಚಾರಣೆಯಾಗಬೇಕು

ಆ-2 ವಿಚಾರಣೆಯಾಗಬೇಕು

ಆ-3 ವಿಚಾರಣೆಯಾಗಬೇಕು

ಆ-4 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ಸಹಿ/- 03.12.2025.

(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.